1721

8. ಬಾಗೇಪಲ್ಲಿ, ಕೋಲಾರ, ಕಿಚ್ಚಳ್ಳಿಪಟ್ಟು ಆಸ್ಪತ್ರೆಗಳ ಕಾಂಪೌಂಡುಗಳು ಹಾಕುವ ವಿಷಯದಲ್ಲಿ ಸೀನಿಯರ್ ಸರ್ಜ್ಯರವರಿಂದ ತಲುಪಿದ 5405—311—962ನೆ ನಂಬರುಗಳ ಮಿವೋಗಳು ಓದಲಾಯಿತು.

ಸೀನಿಯರ್ ಸರ್ಜ್ಯ ಸಾಹೇಬರವರು ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟಿನಲ್ಲಿ c IX ಕಂಟ್ರಿಬ್ಯೂಷ್ಯ ಎಂಬ ಹೆಡ್ಡಿನಲ್ಲಿ ಆಸ್ಪತ್ರೆಗಳ ರಿಪೇರಿಗಳಿಗಾಗಿ ನಮೂದಾಗಿರುವ ಮೊಬಲಗ್ಯೆ ಗಮನ ಕೊಡಬೇಕೆಂದುನ್ನು ಈ ವರುಷ ಈ ಮೊಬಲಗನ್ನು ಬೋರ್ಡಿನವರು ಹೆಚ್ಚಿಸುವದಕ್ಕೆ ಅಶಕ್ತರೆಂದುನ್ನು ತೀರ್ಮಾನ ಮಾಡಲ್ಪಟ್ಟಿತು.

9. ಮುಸಾಫರ ಬಂಗ್ಲೆಗಳಿಗೋಸ್ಕರ ಹೊಸ ಸಾಮಾನುಗಳು ಕೊಂಡುಕೊಳ್ಳಲು ಮತ್ತು ಹಳೇ ಸಾಮಾನುಗಳನ್ನು ರಿಪೇರಿ ಮಾಡಿಸಲು 100 ರೂಪಾಯಿಗಳ ಬಳಗಾಗಿರುವ ಅಂದಾಜುಗಳನ್ನು ಮಂಜೂರು ಮಾಡಲು ಡಿಪ್ಯುಟಿ ಕಮಿಷ್ನರುಗಳಿಗೆ ಅಧಿಕಾರ ಕೊಟ್ಟಿರುತ್ತೆಂದು 7—7—904ನೆ ಮಕ್ಕಂ 156-65—G. F. 15-96ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ರಿಕಾರ್ಡು ಮಾಡಲ್ಪಟ್ಟಿತು.

10. ಪ್ರೆಸಿಡೆಂಟರವರಿಂದ 500 ರೂಪಾಯಿಗಳ ಬಳಗಾಗಿ ಮಂಜೂರು ಮಾಡಲ್ಪಟ್ಟ ಕಾವಲುಗಾರಿಗಳ ಲೀಪ್ಟು 1904ನೆ ಇಸವಿ ಜೂ, ಜುಲೈ, ಆಗಸ್ಟ್ ಮಾಹೆಗಳ ಬಾಬತು ಬೋರ್ಡಿನಲ್ಲಿ ಖರ್ಚು ಮಾಡಿ ಕಳುಹಿಸಬೇಕೆಂದು ಸೆಕ್ರಟೇರಿ ಸಾಹೇಬರವರಿಂದ ಬಂದ 27—8—904ನೆ ಮಕ್ಕಂ 1691 - 93-2—L. B. ನೆ ನಂಬರು ಡಾಕೆಟ್ಟು ಓದಲಾಯಿತು.

11. 1904—905ನೆ ಇಸವಿ ಕೋಲಾರದ ಡಿ|| ಬೋರ್ಡಿನ ಡಿ|| ಫಂಡು ಬಜ್ಜಟ್ಟು ಮಂಜೂರಾಗಿ ಬಂದ ಗೌರ್ನಮೆಂಟು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

12. 1903—904ನೆ ಇಸವಿ ಸಾಲ್ ಆಬೈರಿನಲ್ಲಿ ನಿಮಿಕಲ್ ಬಂದ ಕಾವಲುಗಾರಿಗಳ ಲೀಸ್ಟು ಓದಲಾಯಿತು. ಈ ಲೀಸ್ಟುಗಳನ್ನು ಗೌರ್ನಮೆಂಟಿಗೆ ಕಳುಹಿಸಿ ಅದಕ್ಕೆ ಬೇಕಾದ ಮೊಬಲಗು ಕೇಳಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

13. 1903 - 904ನೆ ಸಾಲಿನ ಡ್ರಾಪ್ಟು ಡಿ|| ಫಂಡು ಅಡಿಮಿನಿಸ್ಟ್ರೇಷ್ಯ ರಿಪೋರ್ಟು ಓದಲಾಯಿತು.

ಇದಕ್ಕೆ ಬೋರ್ಡಿನವರು ಬಿಪ್ಪಿ ಇದರ ನಕಲನ್ನು ಗೌರ್ನಮೆಂಟಿಗೆ ಕಳುಹಿಸಬೇಕೆಂತ ತೀರ್ಮಾನ ಮಾಡಿದರು.

14. ಬರುವ ಡಿಸೆಂಬರು ಮಾಹೆ 19ನೆ ತಾ|| ಸೋಮವಾರ ತಿರಿಗಿ ಮಿಟಿಂಗ್ ಕೋಲಾರದಲ್ಲಿ ನಡಿಯಬೇಕೆಂದು ತೀರ್ಮಾನವಾಯಿತು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ, ತಾರೀಖು 7ನೆ ಅಕ್ಟೋಬರ್ 1904.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಜೋಡಿ ಬುದಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಜೋಡಿ ಬುದಹಳ್ಳಿ ಗ್ರಾಮದಲ್ಲಿ 1904ನೆ ಇಸವಿ ನವಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1904ನೆ ಅಕ್ಟೋಬರ್ 27ನೆ ಮಕ್ಕಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 591ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 7ನೆ ಅಕ್ಟೋಬರ್ 1904.

ತಿ. ನರಸೀಪುರ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ಮಡವಾಡಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ, ತಿ. ನರಸೀಪುರ ತಾಲ್ಲೂಕು ಸದರಿ ಮಡವಾಡಿ ಗ್ರಾಮದಲ್ಲಿ 1904ನೆ ಇಸವಿ ನವಂಬರ್ ಮಾಹೆ 16ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1904ನೆ ಅಕ್ಟೋಬರ್ 27ನೆ ಮಕ್ಕಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 592ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 13ನೆ ಅಕ್ಟೋಬರ್ 1904.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಜೋಡಿ ಕಲಿಯೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಟಿ. ನರಸೀಪುರ ತಾಲ್ಲೂಕು ಜೋಡಿ ಕಲಿಯೂರು ಗ್ರಾಮದಲ್ಲಿ 1904ನೆ ನವಂಬರ್ ಮಾಹೆ 14ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1904ನೆ ಅಕ್ಟೋಬರ್ 13ನೆ ಮಕ್ಕಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 590ನೆ ನಂಬರು ಪೇಜು ನೋಡತಕ್ಕದ್ದು.

ಇಸ್ತಿಹಾರ್ನವಾ. ತಾರೀಖು ನೆ ಅಕ್ಟೋಬರ್ 1904.

ಯಾಡತೊರೆ ತಾಲ್ಲೂಕು ಚುಂಚನಕಟ್ಟೆ ಹೋಬಳಿ ಸರ್ವಮಾನ್ಯ ಹೊಸೂರು ಮತ್ತು ಹಳೆಯೂರು ಗ್ರಾಮಗಳನ್ನ ಸತ್ತಾರಕ್ಕೆ ಬರಬೇಕಾದ ಜಾಕಿಗೀರ್ತರವಾಗಿ ಸದರಿ ಗ್ರಾಮಗಳನ್ನು 1904ನೆ ಇಸವಿ ನವೆಂಬರ್ ಮಾಹೆ 16ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಯೆಂದು ಕರದಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ವಿವರಕ್ಕೆ ಜಿಲ್ಲೆಯ 1904ನೆ ಇಸವಿ ಅಕ್ಟೋಬರ್ 27ನೆ ಮುಕ್ಕಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 593-594ನೆ ನಂಬರು ಪೇಜಿ ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮೀಷನರು.

ಎಡೆಹಳ್ಳಿ ಸಬ್ ಡಿವೀಜ್ಞ ಮುನ್ಸೀಫರವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿದೇಣೀದಾರ ಎಡೆಹಳ್ಳಿ ಸಬ್ ತಾಲ್ಲೂಕ್ ಕುದುರುಗುಂಡಿ ಪೋಲೀಸ್ ಜವಾನ ಕಾರಬೈಲ್ ಲಿಂಗೋಜಿ ವಿಷಯದಲ್ಲಿ—

ಸ್ 1903-04ನೆ ಇಸವಿ ದಿವಾಳಿ ಕೇಸ್ ನಂ. 270.

ಹುಕುಂ.

ಮೇಲ್ಕಂಡ ಕಾರಬೈಲ್ ಲಿಂಗೋಜಿಯು ನಿರ್ಗಂ;ದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕನ್ನು ಮುನ್ಸೀಫ್ ಎ. ನರಸಿಂಹ ಅಯ್ಯಂಗಾರ್, ಎಸ್ಕ್ವೈರ್ ಯವರ ರೂಬರೂ ಅರ್ಜಿದಾರರಾದ ಕಾರಬೈಲು ಲಿಂಗೋಜಿಯು ಸದರಿ ಯವರ ಲೇಣೆದಾರರಾದ 1ನೆ ಕೂತಗೋಡು ಕೃಷ್ಣಭಟ್ಟರು, 2ನೆ ಕೂತುಗೋಡು ಲಕ್ಷ್ಮೀನಾರಾಯಣಭಟ್ಟರು ಇವರುಗಳ ತರಫ್ ಪ್ಲೀಡರ್ ಮೆ" ಶೇಷಾಚಲ್ಯಯ್ಯನವರು ಇವರಿಗೂ ದರ್ಖಾಸ್ತು ಮಾಡಲ್ಪಟ್ಟಿತು. ಈ ಕೆಳಗೆ ನಮೂದು ಮಾಡಲ್ಪಡುವ ಲೇಣೀದಾರರು ತಮಗೆ ಈ ದರ್ಖಾಸ್ತು ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—1ನೆ ಜವ್ಕಟಿಗ ವಿಶ್ವೇಶ್ವರಭಟ್ಟ, 4ನೆ ವಗಳೆ ವೆಂಕಟಾಚಲ್ಯಯ್ಯ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರಿ ಕಾರಬೈಲ್ ಲಿಂಗೋಜಿಯವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ಘೋಷ್ಯಾನಿಸಲ್ಪಟ್ಟಿರುತ್ತಾಯಾಗಿ ಸದರಿ ದಿವಾಳಿಯಾದವನನ್ನು ನಿರ್ಗಂಧದಿಂದ ಘೋಷಣೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಕರವಾಗಿ ಯಾಗಲಿ ದಸ್ತಗಿರಿ ಮಾಡಲ್ಪಟ್ಟ ನಿರ್ಗಂಧವಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 21ನೆ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೆದಾರರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿಯುಂಟಾದದ್ದು.	ದೇಣಿ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರು ಇದ್ದರೆ. ಗಿರ್ವಿ
		ರೂ. ಆ. ಪೈ.		
1	ಕೂತುಗೋಡು ಕೃಷ್ಣಭಟ್ಟ ...	98 0 0		ಡಿಕ್ರಿ ಬಾಬತು.
2	ಕೂತುಗೋಡು ಲಕ್ಷ್ಮೀನಾರಾಯಣಭಟ್ಟ ...	ಜಿಲ್ಲರೆ		
3	ಜವ್ಕಟಿಗೆ ವಿಶ್ವೇಶ್ವರ ಭಟ್ಟ ...	400 0 0	...	ಲೆಖ್ಕದ ಬಾಕಿ.
		ಜಿಲ್ಲರೆ		
4	ವಗಳೆ ವೆಂಕಟಾಚಲ್ಯಯ್ಯ ...	15 0 0	...	ಪ್ರೊನೋಟು.
	ಜುಮ್ಲಾ ...	513 0 0		

ಎ. ನರಸಿಂಹ ಐಯ್ಯಂಗಾರ್,
ಮುನ್ಸೀಫ್.

ನೋಟಿಸು.

ತಾರೀಖು 2ನೆ ನವೆಂಬರ್ 1904.

ದೇವಾಂಬ ಅಗ್ರಹಾರದ ವೃತ್ತಿಗೆ ಸೇರಿದ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಇನಾಂ ಗ್ರಾಮಗಳ ವಿಜಂಟರಾದ ವೆಂಕಟರಾಮಯ್ಯನವರಿಂದ ತಮ್ಮಗಳಿಗೆ ಒಪ್ಪಿಕಾದ ಗ್ರಾಮದ ಸುವರ್ಣಾದಾಯದ ಪೊಬಲಗನ್ನು ಕೊಡಿಸಿಕೊಡಬೇಕೆಂದು* ಈ ರೀಬೆಲ್ಲಿ ನೆಮೂದಿಸಿರುವ ವೃತ್ತಿವಂತರು ಮಾಡಿರುವ ಫಿರ್ಯಾದನ್ನು 1904ನೆ ಇಸವಿ ಡಿಸೆಂಬರು 13, 14 ಮತ್ತು 15ನೆ ತಾರೀಖುಗಳಲ್ಲಿ ಕೃಷ್ಣರಾಜಪೇಟೆ ಮೊಕ್ಕಾಂನಲ್ಲಿ ವಿಚಾರಿಸಿ ವ್ಯವಸ್ಥೆ ಪಡಿಸುತ್ತೆ. ಸಮ್ಮಂಧಪಟ್ಟ ಪಾರ್ಟಿಗಳೆಲ್ಲಾ ತಕ್ಕ ದಾಖಲಾತಿಗಳನ್ನಿನ ಡಿಸೆಂಬರು 13ರ ಲಾಗಾಯಿತು ಫಿರ್ಯಾದು ಫೈಸಲಾಗುವ ವರೆಗೆ ಹಾಜರಾಗತಕ್ಕದ್ದು. ಹಾಜರಾಗದವರ ತಕರಾರನ್ನು ಡೆಪ್ಯುಟಿ ಕಮೀಷನರವರ 23—7—1901ನೆ ಮುಕ್ಕಂ 190ನೆ ನಂಬರು ಯಾದಿ ಅನುಸರಿಸಿ ಪರಿಶ್ಕರಿಸುತ್ತೆ.

*(1) ಮೆಳ್ಳಹಳ್ಳಿ ವೃತ್ತಿದಾರ್ ವೆಂಕಟನಾರಣಭಟ್ಟರು.
(2) ಯಾಜೇನಹಳ್ಳಿ ವೃತ್ತಿದಾರ್ ವ್ಯಾಸರಾಯರು (ದೇವಸ್ಥಾನದ ವೃತ್ತಿ ಬಾಬತು)
(3) ಬಂಡಹೊಳೆ ವೃತ್ತಿದಾರ್ ವೆಂಕಟರಮಣಯ್ಯನವರು.
(4) ಕುರುಚೇನಹಳ್ಳಿ ವೃತ್ತಿದಾರ್ ನರಶಿಂಹಯ್ಯನವರು.
(5) ಆಲಿಂಬಾಡಿ ಮಂಚಹೊಳಲು ವೃತ್ತಿದಾರ್ ಸೂರಪಂಡಿತರು.

ಎ. ಸುಬ್ರಮ್ಮಣ್ಯ್ಯ,
ಅಸಿಸ್ಟೆಂಟ್ ಕಮೀಷನರ್, ಕೃಷ್ಣರಾಜಪೇಟೆ ಡಿವೀಜ್ಞ.